ಇಂದು ದಿನಾಂಕ 17-06-2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿಃ ಶ್ರೀ ವಿ.ಆರ್.ಬಿ. ವಕೀಲರಿಂದಃ**

**5.** ಸಾಕ್ಷಿ ಡೆಂಟಲ್ ಕೇರ್ ಸೆಂಟರಿನ ಟ್ರೀಟ್‌ಮೆಂಟ್ ಸರ್ಟಿಫಿಕೇಟ್ ಹಾಜರುಪಡಿಸಿದ್ದು ಎದುರುದಾರ ಪರ ವಕೀಲರ ಆಕ್ಷೇಪಣೆ ಮೇರೆಗೆ ಸದರಿ ದಾಖಲಾತಿಯನ್ನು ನಿ .ಪಿ.46 ಎಂದು ಗುರುತಿಸಲಾಯಿತು. ನಿ.ಪಿ. 45 - ಮೆಡಿಕಲ್ ಬಿಲ್ ನಾನು ಚಿಕಿತ್ಸೆ ಪಡೆದಿರುವುದಕ್ಕೆ ನೀಡಿದ ಬಿಲ್ ಆಗಿರುತ್ತದೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿಃ ಶ್ರೀ ಎಸ್.ಎಂ.ಬಿ. ವಕೀಲರಿಂದಃ**

**6.** ನಿ.ಪಿ.45 ಮೆಡಿಕಲ್ ಬಿಲ್‌ಗೆ ಸಂಬಂಧಪಟ್ಟಂತೆ ವೈದ್ಯರು ಕೊಟ್ಟಿರುವ ಔಷಧಿ ಚೀಟಿಯನ್ನು ಹಾಜರುಪಡಿಸಿದ್ದೇನೆ . ನಿ.ಪಿ.45 ಅಪಘಾತಕ್ಕೆ ಸಂಬಂಧಪಟ್ಟ ಬಿಲ್ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೂ ನಾನು ಹಾಜರುಪಡಿಸಿದ ನಿ.ಪಿ. 45 ಬಿಲ್‌ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ, ಅರ್ಜಿ ಬರೆಯಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಅರ್ಜಿಯನ್ನು ತಯಾರಿಸುವ ಸಮಯದಲ್ಲಿ ನಾನು ಯಾವ ಯಾವ ಆಸ್ಪತ್ರೆಯಲ್ಲಿ ಯಾವ ಯಾವ ವೈದ್ಯರ ಬಳಿ ಚಿಕಿತ್ಸೆ ಪಡೆದಿದ್ದೇನೆ ನಮ್ಮ ವಕೀಲರ ಬಳಿ ಹೇಳಿರುತ್ತೇನೆ.

**7.** ನಿ.ಪಿ.46 ನ್ನು ನೀಡಿದ ಡಾ. ಎಂ.ಜಿ. ಹೆಗಡೆ ಇವರಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಅರ್ಜಿಯನ್ನು ತಯಾರಿಸುವ ಸಮಯದಲ್ಲಿ ನಾನು ನಮ್ಮ ವಕೀಲರಿಗೆ ಹೇಳಿದ್ದೆ. ನಿ.ಪಿ.46 ಕ್ಕೂ ಈ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇದು ಅಪಘಾತದಿಂದ ಆದ ಗಾಯದ ಬಗ್ಗೆ ಚಿಕಿತ್ಸೆ

ಪಡೆದಿದ್ದು ಅಲ್ಲ ಎಂದರೆ ಸರಿಯಲ್ಲ. ಅಪಘಾತ ಸಂಬಂಧ ನನಗೆ ನಿ.ಪಿ. 46 ರಲ್ಲಿ ತೋರಿಸಿದಂತಹ ಯಾವುದೇ ಗಾಯಗಳಾಗಿರಲಿಲ್ಲ ಎಂದರೆ ಸರಿಯಲ್ಲ ಹಾಗೂ ಅದರಲ್ಲಿ ತೋರಿಸಿದಷ್ಟು ಹಣವನ್ನು ನಾನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ . ವೈದ್ಯರ ಮೇಲೆ ಪ್ರಭಾವಬೀರಿ ಹೆಚ್ಚಿನ ಪರಿಹಾರ ಪಡೆಯಲು ನಿ .ಪಿ. 46 ಸೃಷ್ಠಿ ಮಾಡಿದ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ನಿ.ಪಿ.46 ರಲ್ಲಿ ನಮೂದಿಸಿದಂತೆ ಯಾವುದೇ ಮುಂದುವರಿದ ಚಿಕಿತ್ಸೆ ಮತ್ತು ಚಿಕಿತ್ಸೆಗಾಗಿ ಹಣದ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ . ಅಪಘಾತದಲ್ಲಿ ನನಗೆ ಯಾವುದೇ ತೀವ್ರ ಸ್ವರೂಪದ ಗಾಯ ಆಗಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಎದುರುದಾರರ ಪರವಾಗಿಃ ಶ್ರೀ ವೈ.ವಿ.ಎಸ್. ವಕೀಲರಿಂದಃ**

4 ನೇ ಎದುರುದಾರರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.
ಕುಮಟಾ